**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್,**
**ಬಸವನ ಬಾಗೇವಾಡಿ.**

ಸಿಸಿ ನಂಃ 450/2015

ಸಿ.ಡಬ್ಲ್ಯೂ: 8 ಪಿ.ಡಬ್ಲೂ: 5

| | | |
|---|---|---|
| ಸಾಕ್ಷಿದಾರರ ಹೆಸರು | ಡಾ ಅಶೋಕ ಪಟ್ಟಣಶೆಟ್ಟಿ | |
| ತಂದೆ/ಗಂಡನ ಹೆಸರು | ನೀಲಪ್ಪ | |
| ವಯಸ್ಸು | 73 | ವರ್ಷ |
| ಉದ್ಯೋಗ | ನಿವೃತ್ತ ವೈದ್ಯಾಧಿಕಾರಿಗಳು | |
| ವಾಸಸ್ಥಳ | ವಿಜಯಪೂರ | |

**<u>ಸಾಕ್ಷಿಯನ್ನು ಇಂದು ದಿನಾಂಕಃ 12.05.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ</u>**

1. ನಾನು 2013 ರಿಂದ 2023 ರವರೆಗೆ ಜಿಲ್ಲಾ ಆಸ್ಪತ್ರೆ ವಿಜಯಪೂರದಲ್ಲಿ ವೈದ್ಯಾಧಿಕಾರಿಯಾಗಿ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ: 17.02.2014 ರಂದು ಮಧ್ಯಾಹ್ನ 12.35 ಗಂಟೆಗೆ ಚಾಸಾ-1 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು, ನಾನು ಅವರನ್ನು ಪರಿಕ್ಷಿಸಿದಾಗ,

1. ಎದೆಯ ಭಾಗದಲ್ಲಿ ನೋವಿನ ಅನುಭವ,
2. ಬೆನ್ನಿನ ಹಿಂಭಾಗದಲ್ಲಿ ನೋವಿನ ಅನುಭವ,
3. ಎರಡು ಬುಜಗಳಲ್ಲಿ ನೋವಿನ ಅನುಭವ,
4. ಬಲ ಕಾಲಿನಲ್ಲಿ ನೋವಿನ ಅನುಭವ,

ನಂತರ ನಾನು ಚಾಸಾ-1 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-1 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ನಾನು ಸದರ ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-1 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ.

3. ನಾನು ಮೇಲೆ ಹೇಳಿದ ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಿಪಿ-5 ರಲ್ಲಿ ನಮೂದಿಸಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೆ ಮಾಡಿದಾಗ ಆಗಿರುತ್ತವೆ.

4. ಅದೇ ದಿನ ಮಧ್ಯಾಹ್ನ 12.25 ಗಂಟೆಗೆ ಚಾಸಾ-4 ರವರು ತನ್ನ ಮಗಳಾದ ಚಾಸಾ-5 ರವರೊಂದಿಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು, ನಾನು ಅವರನ್ನು ಪರಿಕ್ಷಿಸಿದಾಗ,

1. ಬೆನ್ನಿನಲ್ಲಿ ನೋವಿನ ಅನುಭಥ
2. ಹೊಟ್ಟೆಯ ಮೇಲ್ಭಾಗದಲ್ಲಿ ನೋವಿನ ಅನುಭವ,
3. ಎಡ ಬುಜ ಮತ್ತು ಎಡಗೈಯಲ್ಲಿ ನೋವಿನ ಅನುಭಥ

ನಂತರ ನಾನು ಚಾಸಾ-4 ರವನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-4 ರವರು ಎಕ್ಸ್ ರೇ ನ್ನು ತಂದು ಹಾಜರುಪಡಿಸಿದ್ದು, ನಾನು ಸದರ ಎಕ್ಸ್ ರೇ ನ್ನು ಪರಿಶೀಲಿಸಲಾಗಿ ಚಾಸಾ-4 ರವರಿಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದು ಕಂಡು ಬಂದಿರುವುದಿಲ್ಲ.

5. ನಾನು ಮೇಲೆ ಹೇಳಿದ ಎಲ್ಲಾ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತವೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು,

ಅದನ್ನು ನಿಪಿ-6 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ನಮೂದಿಸಿದ ಗಾಯಗಳು ಗಟ್ಟಿಯಾದ ಮತ್ತು ಮೊಂಡವಾದ ವಸ್ತುವಿನಿಂದ ಹಲ್ಲೇ ಮಾಡಿದಾಗ ಆಗಿರುತ್ತವೆ.

6 ನಿಪಿ-5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಮು.ಮಾ-1 ಮತ್ತು 2 ಕಲ್ಲುಗಳಿಂದ ಹಲ್ಲೇ ಮಾಡಿದಾಗ ಆಗುವ ಸಾದ್ಯತೆ ಇರುತ್ತದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್.ಬಿ,ಜಿ,ಎನ್.ವಕೀಲರಿಂದ:**

1. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಸೈಕಲ್ ಮೋಟಾರ್ ಮೇಲಿಂದ ಗಟ್ಟಿಯಾದ ರಸ್ತೆಯ ಮೇಲೆ ಬಿದ್ದರೆ ನಿ.ಪಿ.5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಜಮೀನಿನಲ್ಲಿ ಕೆಲಸ ಮಾಡಿದಾಗ ನಿ.ಪಿ.5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಭಾರವಾದ ವಸ್ತುವನ್ನು ತನ್ನ ಶಕ್ತಿ ಮೀರಿ ಎತ್ತಿದಾಗ ನಿ.ಪಿ.5 ಮತ್ತು 6 ರಲ್ಲಿ ನಮೂದಿಸಿದ ಗಾಯಗಳು ಆಗುತ್ತವೆ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ರಲ್ಲಿ ನಮೂದಿಸಿರುವ ಗಾಯಗಳು ಸುಮಾರು 12-24 ಗಂಟೆಗಳ ಒಳಗೆ ಆಗಿರುತ್ತವೆ. ದಿಃ 17.12.2014 ರಂದು ಚಾಸಾ-1 ಮತ್ತು 4 ರವರು ನಮ್ಮ ಆಸ್ಪತ್ರೆ ಬಂದಿವುದಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಸಹಾಯ ಮಾಡಲು ನಿ.ಪಿ -5 ಮತ್ತು 6 ರ ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.